**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಿಹರ**

**ಸಿ ಸಿ ನಂ. 28/2025**

| | | |
|---|---|---|
| ಹೆಸರು | ನಾಗೇಶ | PW -2 |
| ತಂದೆಯ ಹೆಸರು | ಸಣ್ಣ ಹನುಮಂತಪ್ಪ | CW -4 |
| ವಯಸ್ಸು | 40 ವರ್ಷ | |
| ಉದ್ಯೋಗ | ಖಾಸಗಿ ಉದ್ಯೋಗ | ದಿನಾಂಕಃ 01.09.2025 |
| ವಾಸ | ಗುತ್ತೂರು, ಹರಿಹರ | |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತುಃ**

**ಮುಖ್ಯ ವಿಚಾರಣೆ ಸಸಅ ರವರಿಂದ ಃ**

ಚಾಸಾ 1 ರಿಂದ 3 ಹಾಗೂ 5 ರಿಂದ 10 ರವರ ಪರಿಚಯ ಇದೆ. ಆರೋಪಿಯ ಪರಿಚಯ ಇದೆ.

ಸಾಕ್ಷಿಗೆ ಎರಡು ದಾಖಲೆಯನ್ನು ತೋರಿಸಲಾಗಿ ಅದು, ಕೃತ್ಯ ನಡೆದ ಸ್ಥಳ ಪಚಂನಾಮೆ ಮತ್ತು ಕಚ್ಚಾ ನಕಾಶೆ ಆಗಿದ್ದು, ಸಾಕ್ಷಿಯು ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ನಿಪಿ 2 ಮತ್ತು 3 ಎಂದು, ಸಾಕ್ಷಿಯ ಸಹಿಯನ್ನು ನಿಪಿ 2(ಎ) ಮತ್ತು ನಿಪಿ 3(ಎ) ಎಂದು ಗುರುತಿಸಲಾಯಿತು. ದಿನಾಂಕ 13.06.2024 ರಂದು ಕೆ ಎಲ್ ಎಂ ಆಕ್ಸಿವಾ ಫೈನಾನ್ಸ, ಗುರುಪಾದಪ್ಪ ಕಟ್ಟಡದಲ್ಲಿ ಪೊಲೀಸರು ಆರೋಪಿಯು ನಮ್ಮ ಶಾಖೆಯಲ್ಲಿ ಬಂಗಾರದ ಲೇಪನ ಮಾಡಿದ ಆಭರಣಗಳಾದ ಒಂದು ಜೊತೆ ಬಳೆ, ಒಂದು ಉಂಗುರ ಹಾಗೂ ಎರಡು ಜೊತೆ ಬಳೆ ಗಳನ್ನು ನಮ್ಮ ಶಾಖೆಯಲ್ಲಿ ಅಡಮಾನವಿಟ್ಟು ಒಟ್ಟು ರೂ. 2,33,233/-ಗಳನ್ನು ಪಡೆದುಕೊಂಡಿದ್ದು, ಸದರಿ ವಿಚಾರವಾಗಿ ಚಾಸಾ 1 ರವರು ಪ್ರಕರಣವನ್ನು ದಾಖಲಿಸಿದ್ದರಿಂದ ಪೊಲೀಸರು ಸದರಿ ನಮ್ಮ ಕಛೇರಿಗೆ ಬಂದು ಪಂಚನಾಮೆ ಮಾಡಿ, ಕಚ್ಚಾ ನಕಾಶೆ ತಯಾರಿಸಿ, ಸದರಿ ಬಂಗಾರದ ಲೇಪನ ಮಾಡಿದ ಆಭರಣಗಳನ್ನು ಜಪ್ತುಪಡಿಸಿಕೊಂಡಿರುತ್ತಾರೆ. ಆ ಕಾಲಕ್ಕೆ ನಾನು ನಿಪಿ 2 ಮತ್ತು 3 ಕ್ಕೆ ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಛಾಯಾಚಿತ್ರಮ್ನು ತೆಗೆದಿರುತ್ತಾರೆ. ಸಾಕ್ಷಿಯು ಸದರಿ ಛಾಯಾಚಿತ್ರವನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ 4 ಎಂದು ಗುರುತಿಸಲಾಯಿತು.

ಸದರಿ ಪಂಚನಾಮೆ ಕಾಲಕ್ಕೆ ಪೊಲೀಸರು ಚಾಸಾ 2 ಮತ್ತು 3 ರವರ ಪಂಚರನ್ನಾಗಿ ಕರೆದುಕೊಂಡು ಬಂದಿದ್ದರು, ಅಕ್ಕಸಾಲಿಗರಾದ ಚಾಸಾ 9 ರವರನ್ನು ಕರೆದುಕೊಂಡು ಬಂದು ಅವರ ಮೂಲಕ ಆರೋಪಿಯು ಅಡಮಾನವಿಟ್ಟ ಬಂಗಾರದ ಲೇಪನ ಮಾಡಿದ ಆಭಾರಣಗಳನ್ನು ನೈಟ್ರಿಕ್ ಆಸಿಡ್ ಮತ್ತು ಸಾಲ್ಟ ವಾಟರ್ ನ್ನು ಹಾಕಿ ಪರೀಕ್ಷಿಸಿದ್ದು, ಚಾಸಾ 9 ರವರು ಸದರಿ ಆಭರಣಗಳು ಬಂಗಾರ ಲೇಪನ ಮಾಡಿದ ಆಭರಣಗಳು ಎಂದು ಖಚಿತ ಪಡಿಸಿದ್ದರಿಂದ, ಪೊಲೀಸರು ಸದರಿ ಆಭರಣಗಳನ್ನು ಎಲೆಕ್ಟ್ರಾನಿಕ್ ತೂಕದ ಯಂತ್ರದ ಮೂಲಕ ತೂಕ ಮಾಡಿ ಒಂದು ಬಿಳಿ ಬಟ್ಟೆಯಲ್ಲಿ ಹಾಕಿ, ಅರಗಿನಿಂದ ಸೀಲ್ ಮಾಡಿ ತಮ್ಮ ವಶಕ್ಕೆ ಪಡೆದಿರುತ್ತಾರೆ. ನಂತರ ಚಾಸಾ 1 ರವರು ಆರೋಪಿಯ ವಿರುದ್ಧ ದೂರು ಸಲ್ಲಿಸಿರುತ್ತಾರೆ. ಸದರಿ ಆರೋಪಿಯು ನಮ್ಮ ಕಛೇರಿಯಲ್ಲಿ ಆಭರಣಗಳನ್ನು ಅಡಮಾನವಿಟ್ಟು ಸಾಲವನ್ನು ಪಡೆದಿದ್ದು, ಸದರಿ ಸಾಲವನ್ನು ಮರುಪಾವತಿ ಮಾಡದೇ ಇದ್ದಾಗ ನಾವು ಸದರಿ ಆಭರಣಗಳನ್ನು ಹರಾಜು ಪ್ರಕ್ರಿಯೆಗೆ ದಾವಣಗೆರೆಯ ಮುಖ್ಯ ಶಾಖೆಗೆ ತೆಗೆದುಕೊಂಡು ಹೋಗಿದ್ದು, ಅಲ್ಲಿ ಸದರಿ ಆಭರಣಗಳನ್ನು ನೋಡಿ ನಕಲಿ ಆಭರಣಗಳು ಎಂದು ಹೇಳಿದಾಗ ನಾವು ಅವುಗಳನ್ನು ಮತ್ತೆ ದಿನಾಂಕ06.11.2023 ರಂದು ನಮ್ಮ ಹರಿಹರದ ಕಛೇರಿಗೆ ತಂದಿರುತ್ತೇವೆ. ನಂತರ ಆರೋಪಿಗೆ ಸದರಿ ಆಭರಣಗಳನ್ನು ಬಿಡಿಸಿಕೊಳ್ಳಲು ಹೇಳಿದ್ದು, ಆರೋಪಿಯು ಸಮಯವನ್ನು ತೆಗೆದುಕೊಂಡು ಕಾಲಹರಣ

ಮಾಡಿರುತ್ತಾರೆ. ಆರು ತಿಂಗಳ ನಂತರ ಚಾಸಾ 1 ರವರು ಆರೋಪಿಯ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ. ಆರೋಪಿಗೆ ಸಂಬಂಧಿಸಿದ ಎರಡು ಖಾತೆಗಳ ದಾಖಲೆಗಳನ್ನು ಮತ್ತು ಆಧಾರ ಗುರುತಿನ ಚೀಟಿಯ ನಕಲುಗಳನ್ನು, ಕೆ ವೈ ಸಿ ದಾಖಲೆಗಳನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಒಟ್ಟಾಗಿ ನಿಪಿ 5 ಎಂದು ಗುರುತಿಸಲಾಯಿತು.

ಸಾಕ್ಷಿಯು ಈ ದಿನ ನ್ಯಾಯಾಲಯದಲ್ಲಿ ಹಾಜರುಪಡಿಸಿದ ಒಂದು ಜೊತೆ ಬಳೆ, ಒಂದು ಉಂಗುರ ಹಾಗೂ ಎರಡು ಜೊತೆ ಬಳೆ ಗಳನ್ನು ನೋಡಿ ಗುರುತಿಸಿದ್ದು, ಒಂದು ಜೊತೆ ಬಳೆ, ಒಂದು ಉಂಗುರ ವನ್ನು ಒಟ್ಟಾಗಿ ಮು.ಮಾ 1 ಎಂದು ಹಾಗೂ ಎರಡು ಜೊತೆ ಬಳೆಗಳನ್ನು ಮು.ಮಾ 2 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಈ ದಿನ ಆರೋಪಿಯು ನ್ಯಾಯಾಲಯದಲ್ಲಿ ಗೈರು ಹಾಜರಿದ್ದು, ಆರೋಪಿಯ ಗುರುತಿಸುವಿಕೆಯ ಬಗ್ಗೆ ಯಾವುದೇ ಆಕ್ಷೇಪಣೆ ಇಲ್ಲ ಎಂದು ನುಡಿದಿರುತ್ತಾರೆ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಸಾಮಾನ್ಯವಾಗಿ ಗ್ರಾಹಕರು ನಮ್ಮ ಶಾಖೆಯಲ್ಲಿ ಸಾಲವನ್ನು ಪಡೆಯಬೇಕಾದರೆ ಅವರು ತಂದ ಆಭರಣಗಳನ್ನು ಪರೀಕ್ಷಿಸಿ ನಂತರ ಸದರಿ ಆಭರಗಣಗಳ ಮತ್ತು ವ್ಯಕ್ತಿಯ ಛಾಯಾಚಿತ್ರವನ್ನು ತೆಗೆದು ಅವರ ಖಾತೆಗೆ ಹಣ ಜಮೆ ಮಾಡುತ್ತೇವೆ ಎಂದರೆ ಸರಿ. ಚಾಸಾ 1 ರವರಿಗೆ ಪ್ರಸ್ತುತ ಪ್ರಕರಣದಲ್ಲಿ ಆರೋಪಿ ಅಡಮಾನ ಇಟ್ಟ ಆಭರಣಗಳು ಹರಾಜು ಪ್ರಕ್ರಿಯೆಗೆ ಹೋಗಿ ಬಂದ ವಿಚಾರ ತಿಳಿದಿರುತ್ತೆದೇಯೋ ಇಲ್ಲವೋ ಎಂದರೆ ಸಾಕ್ಷಿಯು ಗೊತ್ತಿತ್ತು ಎಂದು ನುಡಿಯುತ್ತಾರೆ. ಆರೋಪಿಯ ಖಾತೆಗೆ ಹಣ ಮಾಡಿದ ವ್ಯಕ್ತಿಗಳು ಚಾಸಾ 5 ಮತ್ತು 6 ಎಂದರೆ ಸರಿ. ಗ್ರಾಹಕರು ಆಭರಣಗಳನ್ನು ಅಡಮಾನವಿಟ್ಟಾಗ ಸದರಿ ಶಾಖೆಯ ವ್ಯವಸ್ಥಾಪಕರು ಅದನ್ನು ಲಾಕರ್ ನಲ್ಲಿ ಇರುತ್ತಾರೆ ಎಂದರೆ ಸರಿ. ಅಡಮಾನವಿಟ್ಟ ಆಭರಗಳಿಗೆ ಮೌಲ್ಯವನ್ನು ಸಹ ನಮೂದು ಮಾಡುತ್ತೇವೆ ಎಂದರೆ ಸರಿ.

ನಾನು ಪೊಲೀಸರ ಮುಂದೆ ದಿನಾಂಕ 13.06.2024 ರಂದು ಹೇಳಿಕೆ ನೀಡಿರುತ್ತೇನೆ. ನನ್ನ ಹೇಳಿಕೆಯಲ್ಲಿ ಆರೋಪಿಯು ಅಡಮಾನ ಮಾಡಿದ ಆಭರಣಗಳು ಹರಾಜು ಪ್ರಕ್ರಿಯೆಗೆ ಹೋಗಿ ಬಂದ ಬಗ್ಗೆ ಹೇಳಿದ್ದೀರಾ ಎಂದರೆ ಸಾಕ್ಷಿಯು ನಾನು ಹೇಳಿರುತ್ತೇನೆ ಆದರೆ ಪೊಲೀಸರು ಬರೆದುಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಪ್ರಕಾಶ ಮತ್ತು ಪವನ ರವರು ಆರೋಪಿಗೆ ಆಭರಣಗಳನ್ನು ವಾಪಸ್ ಪಡೆಯುವಂತೆ ಹೇಳಿರುತ್ತೇವೆ. ಆರೋಪಿಗೆ ನಾವು ನಕಲಿ ಆಭರಣಗಳನ್ನು ಕೊಟ್ಟ ಬಗ್ಗೆ ಮತ್ತು ಅದುನ್ನು ವಾಪಸ್ ಪಡೆಯುವಂತೆ ನೋಟಿಸನ್ನು ನೀಡಿರುತ್ತೇವೆ. ಸದರಿ ನೋಟಿಸಿನ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇವೆ ಎಂದರೆ ಸರಿ. ದಿನಾಂಕ 15.09.2023 ಹಾಗೂ ದಿನಾಂಕ 09.10.2023 ರಂದು ನೋಟಿಸನ್ನು ಕಳುಹಿಸಿದ್ದು ಮತ್ತು ನಾವೇ ಖುದ್ದಾಗಿ ಅವರ ಮನೆಗೆ ಹೋಗಿ ಭೇಟಿಯಾಗಿ ಹೇಳಿರುತ್ತೇವೆ. ನಾನು ನನ್ನ ಹಿಂದಿನ ವ್ಯವಸ್ಥಾಪಕರಿಂದ ಚಾರ್ಜ್ ಪಡೆಯುವಾಗ ನಮಗೆ ಲಾಕರ್ ನಲ್ಲಿದ್ದ ಆಭರಣಗಳನ್ನು ಪರೀಕ್ಷಿಸುವ ಅವಕಾಶ ಇರುದಿಲ್ಲ. ಕೇವಲ ಅವುಗಳ ತೂಕ ಮತ್ತು ನಂಬರಗಳನ್ನು ಮಾತ್ರ ಪರಿಶೀಲನೆ ಮಾಡುತ್ತೇವೆ . ಪೊಲೀಸರು ಪಂಚನಾಮೆಗೆ ಬರುವ ಪೂರ್ವದಲ್ಲಿ ನಾವು ಲಾಕರ್ ನ್ನು ತೆಗೆಯುವುದು ಮತ್ತು ಹಾಕುವುದು ಮಾಡಿರುತ್ತೇವೆ. ಚಾಸಾ 1 ರವರಿಗೆ ಆರೋಪಿಯು ಅಡಮಾನವಿಟ್ಟ ಆಭರಣಗಳು ನಕಲಿ ಎಂದು ಹರಾಜು ಪ್ರಕ್ರಿಯೆಗೆ ಹೋಗಿ ಬಂದ ಮೇಲೆ ಗೊತ್ತಾಗಿರುತ್ತದೆ. ನಮ್ಮ ಶಾಖೆಯಲ್ಲಿ ಅಕ್ಕಸಾಲಿಗರು ಇರುವುದಿಲ್ಲ. ನಮ್ಮ ಸಿಬ್ಬಂದಿಗಳೇ ಆಭರಣಗಳನ್ನು ಪರೀಕ್ಷೆ ಮಾಡುತ್ತಾರೆ. ನಮ್ಮ ಸಿಬ್ಬಂದಿಗಳು ಆಭರಣಗಳನ್ನು ಪರೀಕ್ಷೆ ಮಾಡಿ ಅದು ಬಂಗಾರದ ಆಭರಣ ಎಂದು ಖಚಿತ ಪಡಿಸಿದ ನಂತರವೇ ನಾವು ಸಾಲವನ್ನು ಮಂಜೂರು ಮಾಡುತ್ತೇವೆ ಎಂದರೆ ಸರಿ. ಆರೋಪಿಯು ಅಡಮಾನವಿಟ್ಟ

ಆಭರಣವನ್ನು ಹರಾಜು ಪ್ರಕ್ರಿಯೆಗೆ ಲಾಲ್ ಸಿಂಗ್ ನಾಯ್ಕ ಮತ್ತು ಗೋಪಿಕೃಷ್ಣ ಎಂಬ ಸಿಬ್ಬಂದಿಗಳು ತೆಗೆದುಕೊಂಡು ಹೋಗಿರುತ್ತಾರೆ.

ದಿನಾಂಕ 24.10.2023 ರಿಂದ 06.11.2023 ರವರೆಗೆ ಅಂದರೆ ಹರಾಜು ಪ್ರಕ್ರಿಯೆ ಕಾಲಕ್ಕೆ ಒಟ್ಟು 12 ದಿನಗಳ ಕಾಲ ಆಭರಗಳು ನಮ್ಮ ಶಾಖೆಯಲ್ಲಿ ಇರಲಿಲ್ಲ ಎಂದರೆ ಸರಿ. ಚಾಸಾ 6 ರವರು ಆರೋಪಿಗೆ ಸಾಲದ ಹಣವನ್ನು ಮಂಜೂರಿ ಮಾಡಿ ನಂತರ ದಿನಾಂಕ 14.04.2023 ರಂದು ತಮ್ಮ ಕೆಲಸವನ್ನು ಬಿಟ್ಟು ರಾಜೀನಾಮೆ ಕೊಟ್ಟಿರುತ್ತಾರೆ ಎಂದರೆ ಸರಿ. ಅದೇ ರೀತಿ ಚಾಸಾ 5 ರವರು ಆರೋಪಿಯು ಬಂಗಾರವನ್ನು ಅಡಮಾನ ಮಾಡಿದ ಒಂದು ತಿಂಗಳಿನಲ್ಲಿ ಅಂದರೆ ದಿನಾಂಕ 31.03.2023 ರಂದು ತಮ್ಮ ಕೆಲಸಕ್ಕೆ ರಾಜೀನಾಮೆ ನೀಡಿರುತ್ತಾರೆ ಎಂದರೆ ಸರಿ. ನಮ್ಮ ಶಾಖೆಯಲ್ಲಿ ಬಂಗಾರವನ್ನು ಪರೀಕ್ಷಿಸಲು ಬ್ಲ್ಯಾಕ್ ಸ್ಟೋನ್ ಗೆ ಆಭರಣವನ್ನು ಉಜ್ಜಿ ಅದಕ್ಕೆ ನೈಟ್ರೈಟ್ ಆ್ಯಸಿಡ್ ಹಾಕಿ ನಂತರ ಉಪ್ಪಿನ ದ್ರಾವಣವನ್ನು ಹಾಕಿ ಪರೀಕ್ಷೆ ಮಾಡುತ್ತೇವೆ.

ಆರೋಪಿಯು ನಿಜವಾದ ಬಂಗಾರದ ಆಭರಣಗಳನ್ನು ಅಡಮಾನ ಇಟ್ಟು, ಸಾಲವನ್ನು ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಪೊಲೀಸರು ಯಾವುದೇ ಮಹಜರ ಮಾಡಿಲ್ಲ, ಯಾವುದೇ ಕಚ್ಚಾ ನಕಾಶೆ ತಯಾರಿಸಿಲ್ಲ ಎಂದರೆ ಸರಿಯಲ್ಲ. ಮಹಜರ ಮತ್ತು ಕಚ್ಚಾ ನಕಾಶೆಗೆ ನಾನು ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮಾತು ಕೇಳಿ ಪ್ರಕರಣಕ್ಕೆ ಅನುಕೂಲವಾಗುವಂತೆ ಆರೋಪಿಯ ವಿರುದ್ಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಪ್ರಸ್ತುತ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಿದೆ)

ಓ ಹೇ ಕೇ ಸರಿ ಇದೆ

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಮ್ಎಫ್ ಸಿ ನ್ಯಾಯಾಲಯ,ಹರಿಹರ.